Addnl. Increment 6

( Kan. Exam )

# ಕರ್ನಾಟಕ ಸರ್ಕಾರ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರವರ ಕಛೇರಿ,
## ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1

ಸಂಖ್ಯೆ: ಸಿ4(3) ಕ.ಬಾ.ಪ.ಹೆ.ಭಾ 2/2003-04 ದಿನಾಂಕ: 15-10 2003

ಎಲ್ಲಾ ವಿಭಾಗೀಯ ಸಹ ನಿರ್ದೇಶಕರುಗಳಿಗೆ,/ಜಿಲ್ಲಾ ಉಪನಿರ್ದೇಶಕರು ಗಳಿಗೆ

ವಿಷಯ: ಕನ್ನಡ ಬಾಷಾ ಪರೀಕ್ಷೆ ಉತ್ತೀರ್ಣರಾದವರಿಗೆ ಒಂದು ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

♣♦♣

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರಿ ಆದೇಶದ ಸಂಖ್ಯೆ: ಸಿ.ಆ.ಸು.ಇ. 34 ಸೇ.ನಿ 97 ದಿನಾಂಕ: 3-11-2000, ದಿನಾಂಕ: 12-9-2001 ರಂತೆ ಹಾಗೂ ಈ ಕಛೇರಿ ಪತ್ರ ಸಂಖ್ಯೆ: ಸಿ4(4) ಕ.ಭಾ.ಪ 2001-02, ದಿನಾಂಕ: 22-6-2002 ರಂತೆ ದಿನಾಂಕ: 10-1-1974 ರಿಂದ 2-9-1987 ರವರೆಗೆ ಸರ್ಕಾರಿ ನೌಕರರಾಗಿದ್ದು ಕನ್ನಡ ಬಾಷಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮಾತ್ರ ಒಂದು ಹೆಚ್ಚುವರಿ ವೇತನ ಬಡ್ತಿಗೆ ಅರ್ಹರಿರುತ್ತಾರೆ. ಆದರೆ ಅನುದಾನಿತ ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಯಾವುದೇ ಸೇವಾ ಪರೀಕ್ಷೆಗಳು ಕಡ್ಡಾಯಗೊಳಿಸಿರುವುದಿಲ್ಲ ಮತ್ತು ನಿಯಮ 1974ರ ಕೆ.ಸಿ.ಎಸ್. (Sfkl) ನಿಯಮ 6ರಲ್ಲಿನ ಹೆಚ್ಚುವರಿ ವೇತನ ಬಡ್ತಿಯ ಸೌಲಭ್ಯ ವಿಸ್ತರಿಸಿಲ್ಲ, ಅದರೂ ಅನುದಾನಿತ ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಕನ್ನಡ ಬಾಷಾ ಪರೀಕ್ಷೆ ಪಾಸಾದ ಬಗ್ಗೆ ಒಂದು ಹೆಚ್ಚುವರಿ ವೇತನ ಬಡ್ತಿ ನೀಡಿರುವುದು ಗಮನಕ್ಕೆ ಬಂದಿರುತ್ತದೆ. ಅದ್ದರಿಂದ ಇದೇ ರೀತಿ ಅನುದಾನ ಪ್ರೌಢಶಾಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ ಹೆಚ್ಚುವರಿ ವೇತನ ಬಡ್ತಿಯನ್ನು ನೀಡಿದ್ದರೆ ಪರಿಶೀಲಿಸಿ ದೃಢ ಪಡಿಸಿಕೊಂಡು ವಸೂಲು ಮಾಡಲು ಕ್ರಮ ತೆಗೆದುಕೊಳ್ಳಲು ತಿಳಿಸಿದೆ. ಹಾಗೂ ಕ್ರಮ ತೆಗೆದುಕೊಂಡ ಬಗ್ಗೆ ಈ ಕಛೇರಿಗೆ ವರದಿ ಸಲ್ಲಿಸಲು ತಿಳಿಸಿದೆ.

(sd/-)
ನಿರ್ದೇಶಕರು (ಪ್ರೌಢ ಶಿಕ್ಷಣ)

25/10 25/10/03

S.P \\Type11\d\Est-4\11276_04.doc

1559 / 25/10

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಿಟ್ ಅರ್ಜಿ ಸಂಖ್ಯೆ: 10543-10551/2003 - ಶ್ರೀ ಸಿದ್ದಪ್ಪ ಎಸ್.ದಾನಶೆಟ್ಟಿ, ಬಿಜಾಪುರ ವಿರುದ್ಧ ರಾಜ್ಯ ಸರ್ಕಾರ ಮತ್ತು ಇತರರು.

**ಓದಲಾಗಿದೆ :** 1) ರಿಟ್ ಅರ್ಜಿ ಸಂಖ್ಯೆ: 10543-10551/2003ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ದಿನಾಂಕ: 08-09-04ರ ಆದೇಶ.

2) ದಿನಾಂಕ: 03-11-2000 ಮತ್ತು 12-09-2001ರ ಸರ್ಕಾರದ ಸುತ್ತೋಲೆ ಸಂಖ್ಯೆ: ಸಿಆಸುಇ 34 ಸೇಸೆನಿ 97.

*****

**ಪ್ರಸ್ತಾವನೆ :**

01) ಮೇಲೆ (1)ರಲ್ಲಿ ಓದಲಾದ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 08-09-2004ರ ಆದೇಶದ ಉದೃತ ಭಾಗವನ್ನು [Operative portion] ಈ ಕೆಳಗೆ ಉದ್ಧರಿಸಲಾಗಿದೆ:-

> " Writ Petitions are allowed. The Respondents are directed to consider the claim of the petitioners for grant of additional increments with all consequential benefits under the provisions of the Karnataka Civil Service (Service and Kannada Language Examination] Rules 1974, Circulars dated: 03-01-2000 and 12-09-2001 produced as Annexure-G and H and the law declared by this court in the aforesaid judgement within a period of six months from the date of communication of this order and pass appropriate orders on merits. "

ಅದರಂತೆ, ಪ್ರಸ್ತುತ ಕೋರಿಕೆಯನ್ನು ಈ ಕೆಳಕಂಡಂತೆ ಸರ್ಕಾರ ಪರಿಗಣಿಸಿದೆ.

02) ಕರ್ನಾಟಕ ಸಿವಿಲ್ ಸೇವೆಗಳು (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳ) ನಿಯಮಗಳು, 1974ರ ನಿಯಮ 3(1) ರ ಸಂಬಂಧಿಸಿದ ಭಾಗವನ್ನು ಈ ಕೆಳಗೆ ಉದ್ಧರಿಸಿದೆ:-

> " 3. Obligation of Government Servants to pass certain examination:- (1) Save as otherwise provided in these rules, every Government Servant shall within the period prescribed in sub-rule (2) pass,-
> (i) the Kannada Language Examination, and
> (ii) the prescribed examinations, if any, in respect of the post held by him."

ಸದರಿ ನಿಯಮಗಳನ್ನು ಆಧರಿಸಿ ಸರ್ಕಾರದ ದಿನಾಂಕ: 03-11-2000 ಮತ್ತು 12-09-2001ರ ಸುತ್ತೋಲೆ ಸಂಖ್ಯೆ: ಸಿಆಸುಇ 34 ಸೇಸೆನಿ 97ಗಳನ್ನು ಹೊರಡಿಸಲಾಗಿದೆ. ಸದರಿ ನಿಯಮ ಹಾಗೂ ಸುತ್ತೋಲೆಗಳ ಪ್ರಕಾರ ಕಡ್ಡಾಯ ಪಡಿಸಲಾದ ಕನ್ನಡ ಭಾಷಾ ಪರೀಕ್ಷೆಯಲ್ಲಿ ತೇರ್ಗಡೆಯಾದಲ್ಲಿ

65

ಅಥವಾ ತೇರ್ಗಡೆಯಾಗುವುದರಿಂದ, ವಿನಾಯ್ತಿ ಪಡೆದಿದ್ದಲ್ಲಿ ಅಂತಹ ಹುದ್ದೆಗಳನ್ನು ಧಾರಣ ಮಾಡಿದ ಸರ್ಕಾರಿ ನೌಕರರಿಗೆ ಒಂದು ಹೆಚ್ಚುವರಿ ಬಡ್ತಿಯನ್ನು ನೀಡಿರುವಂತೆ, ತಮಗೂ ಸದರಿ ಸೌಲಭ್ಯವನ್ನು ವಿಸ್ತರಿಸುವಂತೆ ಪ್ರಸ್ತುತ ಅರ್ಜಿದಾರರು ಕೋರಿರುತ್ತಾರೆ.

03) ಅವುಗಳು ಪ್ರಸ್ತುತ ಅರ್ಜಿದಾರರಿಗೆ ಅನ್ವಯಿಸುವುದಿಲ್ಲ. ಏಕೆಂದರೆ ಅರ್ಜಿದಾರರು ಸರ್ಕಾರಿ ನೌಕರರಲ್ಲ. ಅವರು ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರು. ಸದರಿ ನಿಯಮಗಳನ್ನು ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗ ವಿಸ್ತರಿಸಿರುವುದಿಲ್ಲ.

04) ಸರ್ಕಾರಿ ನೌಕರರಿಗೆ ಸಂಬಂಧಿಸಿದಂತೆ ಪ್ರತಿಯೊಬ್ಬ ಸರ್ಕಾರಿ ನೌಕರನು ("ಡಿ" ದರ್ಜೆ ಹುದ್ದೆಯಲ್ಲಿರುವ ನೌಕರರನ್ನು ಹೊರತುಪಡಿಸಿ) ಕನ್ನಡ ಭಾಷಾ ಪರೀಕ್ಷೆ ಮತ್ತು ನಿಗದಿತ ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡುವುದು ಕಡ್ಡಾಯವಾಗಿರುತ್ತದೆ. ಮೇಲೆ ಉದ್ಧರಿಸಿದ ನಿಯಮದ ಪ್ರಕಾರ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಲು ಸಂಬಂಧಪಟ್ಟ ನೌಕರರು ಧಾರಣ ಮಾಡಿರಬಹುದಾದ ಹುದ್ದೆಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿರಬೇಕು ಅಥವಾ ಇಲಾಖಾ ಪರೀಕ್ಷೆಗಳನ್ನು ನಿಗದಿಪಡಿಸಿರದಿದ್ದಲ್ಲಿ ಸದರಿ ಹುದ್ದೆಗೆ ಕನ್ನಡ ಭಾಷಾ ಪರೀಕ್ಷೆಯನ್ನಾದರೂ ಕಡ್ಡಾಯ ಪಡಿಸಿರಬೇಕು ಮತ್ತು ಸಂಬಂಧಪಟ್ಟ ನೌಕರರು ಸದರಿ ಪರೀಕ್ಷೆಗಳನ್ನು : ಪರೀಕ್ಷೆಯನ್ನು ಪಾಸು ಮಾಡಿರಬೇಕು ಅಥವಾ ಪಾಸು ಮಾಡುವುದರಿಂದ ವಿನಾಯಿತಿ ಪಡೆದಿರಬೇಕು.

05) ಆದರೆ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಪರೀಕ್ಷೆ ಹಿಂದೆ ಎಂದೂ ಕಡ್ಡಾಯ ಪಡಿಸಿರುವುದಿಲ್ಲ, ಕಡ್ಡಾಯ ಪಡಿಸದೇ ಇರುವ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಪರೀಕ್ಷೆಗಳನ್ನು ಪಾಸು ಮಾಡಿದ್ದರೂ ಅಥವಾ ಕನ್ನಡ ಭಾಷಾ ಪರೀಕ್ಷೆಯನ್ನು ಪಾಸು ಮಾಡುವುದರಿಂದ ವಿನಾಯಿತಿ ಪಡೆದರೂ ಸಹ ಅನುದಾನಿತ ಶಿಕ್ಷಣ ಸಂಸ್ಥೆ ನೌಕರರಿಗೆ ದಿನಾಂಕ: 03-11-2000 ಮತ್ತು 12-09-2001ರ ಸುತ್ತೋಲೆ ಸಂಖ್ಯೆ: ಸಿಆಸುಇ 34 ಸೇಸೆನಿ 97ರ ಮೇರೆಗೆ ಹೆಚ್ಚುವರಿ ವೇತನ ಬಡ್ತಿ ಸೌಲಭ್ಯವನ್ನು ವಿಸ್ತರಿಸಲು ಸರ್ಕಾರಿ ನಿಯಮ/ಆದೇಶದ ಪ್ರಕಾರ ಆಸ್ಪದವಿರುವುದಿಲ್ಲ.

06) ಈಗಾಗಲೇ ಮೇಲೆ ಹೇಳಿದಂತೆ ಸದರಿ ನಿಯಮಗಳು ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ ಅನ್ವಯಿಸುವುದಿಲ್ಲ. ಆದುದರಿಂದ ಅದನ್ನು ಆಧರಿಸಿ ಹೊರಡಿಸಲಾದ ದಿನಾಂಕ: 03-11-2000 ಮತ್ತು 12-09-2001ರ ಸುತ್ತೋಲೆಗಳ ಲಾಭವನ್ನು ಅವರಿಗೆ ಅನ್ವಯಿಸುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

07) ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ: 08-09-2004ರ ಆದೇಶದಲ್ಲಿ ಉಲ್ಲೇಖಿಸಿರುವ ರಿಟ್ ಅರ್ಜಿ ಸಂಖ್ಯೆ: 32163-32208/98ರ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 27-11-98ರ ತೀರ್ಪಿನನ್ವಯ, ಅದರಲ್ಲಿನ ರಿಟ್ ಅರ್ಜಿದಾರರಿಗೆ ಸರ್ಕಾರದ ದಿನಾಂಕ: 28-11-95ರ ಆದೇಶ ಸಂಖ್ಯೆ: ಎಫ್‌ಡಿ 27 ಎಸ್‌ಆರ್‌ಎಸ್ 95ರನ್ವಯ ಲಭ್ಯವಿರುವ ಸೌಲಭ್ಯವನ್ನು, ಎಂದರೆ, ದಿನಾಂಕ: 01-04-95ರಿಂದ 31-03-98ರ ಅವಧಿಯಲ್ಲಿ ನಿವೃತ್ತರಾದ ನೌಕರರಿಗೆ ಶೇಕಡ 90ರಷ್ಟು ತುಟ್ಟಿಭತ್ಯೆಯನ್ನು ನಿವೃತ್ತಿ ಉಪದಾನಕ್ಕೆ ಸೇರಿಸುವ ಸೌಲಭ್ಯವನ್ನು ವಿಸ್ತರಿಸುವಂತೆ ನಿರ್ದೇಶನ ಇರುತ್ತದೆ. ಅದರ ಸಂಬಂಧಿಸಿದ ಭಾಗ ಕೆಳಕಂಡಂತೆ ಇರುತ್ತದೆ:-

SO SEC-A

64

" This was communicated by the Commissioner of Public Instructions, Karnataka, to all Deputy Directors of Public Instructions by letter dated: 19-10-1981 as follows:-

> "Government have extended the benefit of DCRG to the employees of State aided educational institutions with effect from 01-01-1981 in the Government order. ED 18 UPC 81, dated: 29-04-81 on par with the Government servants".

Consequently whatever benefits are extended are made applicable to the Government Servant as retirement Gratuity/Death gratuity, becomes automatically applicable to the staff of the aided institutions as Government has extended the benefit of retirement Gratuity /Death Gratuity to staff of aided institutions on par with Government Employees, as per Government Order dated: 29-04-81, it is not possible to deny then the benefit of Government order dated: 28-11-95 on the basis of a term contained in the triple benefits scheme, barring dearness allowance being considered for the purpose of pension. In so far as the DCRG amount is concerned, the Government has passed a separate order stating that the employees of aided institutions will be entitled to the said benefit on par with the Government Servant. The use of the words on the scale admissible to State Government Employees". In the Government Order dated: 29-04-81 would be then the Government servants were extended certain additional benefits relating to gratuity as per order dated: 28-11-95, the same automatically stands extended and applicable to the employees of the aided institutions. This is in consonance with the abowed policy of the government and the decision of the Supreme Court that employees of aided institutions should be treated equal to corresponding Government Servants, in matter of pay and allowances. The rejection of the request for extension of this benefit, contained in Government order dated: 28-11-95, as per order dated: 25-08-98 is contrary to the Government Order dated: 29-04-81, which continues to be in force. Therefore these petitions will have to be succeed."

ಇದಲ್ಲದೇ, ಪಿಂಚಣಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ, " Pension and Gratuity are no longer bounty to be distributed by the Government to its employees on their retirement but have become, under the decisions of the Court, valuable rights and property

SO SEC-A

in their hands" ಯೆಂದು ಕರ್ನಾಟಕ ಉಚ್ಚ ನ್ಯಾಯಾಲಯ ILR 1999 AIR 178 ಈ ಪ್ರಕರಣದಲ್ಲಿ ಘೋಷಿಸಿದೆ.

08) ಆದುದರಿಂದ ಕನ್ನಡ ಪರೀಕ್ಷೆಯನ್ನು ಪಾಸು ಮಾಡಿದ್ದಕ್ಕಾಗಿ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ (additional annual increment for having passed Kannada examination)ಗೆ ಸಂಬಂಧಿಸಿದ ಪ್ರಸ್ತುತ ಕೋರಿಕೆ, ಮಾನ್ಯ ಉಚ್ಚ ನ್ಯಾಯಾಲಯದ, ಮೇಲೆ ಉಲ್ಲೇಖಿಸಿದ, ರಿಟ್ ಅರ್ಜಿ ಸಂಖ್ಯೆ: 32163-32208/98ರಲ್ಲಿ ನೀಡಲಾದ ದಿನಾಂಕ: 27-11-98ರ ತೀರ್ಪಿನ ವ್ಯಾಪ್ತಿಯಲ್ಲಿ ಬರುವುದಿಲ್ಲ. ಏಕೆಂದರೆ, ಪ್ರಸ್ತುತ ಕೋರಿಕೆ ಪಿಂಚಣಿಯ ಸೌಲಭ್ಯಗಳಿಗೆ ಸಂಬಂಧಿಸಿರುವುದಿಲ್ಲ. ಹಾಗೂ ಆ ಕೋರಿಕೆಯನ್ನು ಒಪ್ಪಲು ನಿಯಮಗಳಲ್ಲಿ ಅವಕಾಶ ಇಲ್ಲ.

09) ಇದಲ್ಲದೇ ಅರ್ಜಿದಾರರು ಕೋರಿದಂತೆ ಅವರಿಗೆ ಸದರಿ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ನೀಡಲು ನಿಯಮಗಳಲ್ಲಿ ಆಸ್ಪದ ಇಲ್ಲ. ಆದರೆ ದಿನಾಂಕ: 02-02-2000ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99ರಲ್ಲಿ ಒಳಗೊಂಡಿರುವ " the Karnataka Educational Institutions [Recruitment and Terms and conditions of service of employees in Private Aided Primary and Secondary Educational Institutions] Rules, 1999 ರ ನಿಯಮ 3(1) (ಬಿ) ರನ್ವಯ ಅನುದಾನಿತ ಶಿಕ್ಷಣ ಸಂಸ್ಥೆಯ ನೌಕರರಿಗೆ, ಸರ್ಕಾರಿ ಶಿಕ್ಷಣ ಸಂಸ್ಥೆಯ ನೌಕರರಿಗೆ ನೀಡುವಂತೆಯೇ ವೇತನ (Salary) ವನ್ನು, ಅಂದರೆ, ವೇತನ ಶ್ರೇಣಿ, ಮೂಲ ವೇತನ, ತುಟ್ಟಿಭತ್ಯೆ, ಮನೆ ಬಾಡಿಗೆ ಭತ್ಯೆ ಮತ್ತು ನಗರ ಭತ್ಯೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ. ಈ ರೀತಿ ವೇತನಕ್ಕೆ ಸಂಬಂಧಿಸಿದಂತೆ, ಸದರಿ ನಿಯಮದ ಪ್ರಕಾರ, ಸರ್ಕಾರಿ ನೌಕರರ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ನೌಕರರ ನಡುವೆ ಸಮಾನತೆ ಲಭ್ಯವಿರುತ್ತದೆ. ಆದರೆ ಕನ್ನಡ ಪರೀಕ್ಷೆಯನ್ನು ಪಾಸು ಮಾಡಿದ ಕಾರಣಕ್ಕಾಗಿ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ನೀಡಬೇಕೆಂಬ ಪ್ರಸ್ತುತ ಕೋರಿಕೆ ಅದರಲ್ಲಿ ಒಳಗೊಂಡಿರುವುದಿಲ್ಲ. ಏಕೆಂದರೆ, ಅಂತಹ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ ನೀಡಬೇಕೆಂಬ ಆಸ್ಪದ ಅವರಿಗೆ ಅನ್ವಯವಾಗುವುದಿಲ್ಲ. ಸದರಿ ನಿಯಮದ 3(1) (ಬಿ) ವನ್ನು ಈ ಕೆಳಗೆ ಉದ್ಧರಿಸಿದೆ:-

> " (b) Subject to the financial capacity of the State Government the salary of employees in respect of posts admitted into aid in recognized private educational institutions receiving aid from the State Government shall generally be the same as those applicable for the corresponding category of employees in Government educational institutions as per orders issued by the State Government in respect of this category of employees from time to time.
>
> Provided that no employee of an aided institution shall be entitled to the benefits enumerated in Annexure-II".

ಸದರಿ ನಿಯಮ 03ರ ಸೂಕ್ತತೆಯನ್ನು ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ: 5115-5387/2000 c/w W.A. 6296/2000, W.A. 5809-5820/2000 ಮತ್ತು W.A. 682/2000 ರಲ್ಲಿ ನೀಡಿದ ದಿನಾಂಕ: 11-01-2001ರ ತೀರ್ಪಿನನ್ವಯ ಎತ್ತಿ ಹಿಡಿದಿದೆ.

10) ಸರ್ಕಾರಿ ನೌಕರರಿಗೆ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ, 1978ರಡಿ ರಚಿಸಲಾದ ನಿಯಮಗಳು ಅನ್ವಯವಾಗುತ್ತದೆ. ಆದರೆ ಅನುದಾನಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರಿಗೆ,

ಕರ್ನಾಟಕ ಶಿಕ್ಷಣ ಅಧಿನಿಯಮ 1983ರಡಿ ರಚಿಸಲಾದ ದಿನಾಂಕ: 02-02-2000ರ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99ರಲ್ಲಿ ಒಳಗೊಂಡಿರುವ 1999ರ ಸದರಿ ನಿಯಮಗಳನ್ನು ರೂಪಿಸಲಾಗಿದೆ.

11) ಇದೇ ರೀತಿಯಾದ ಮನವಿಯನ್ನು ಸಲ್ಲಿಸಿದ ರಿಟ್ ಅರ್ಜಿ ಸಂಖ್ಯೆ: 967/2003 – ಶ್ರೀ ಎಂ.ಎಸ್.ಉದುಪುಡಿ ವಿರುದ್ಧ ರಾಜ್ಯ ಸರ್ಕಾರ ಈ ಪ್ರಕರಣದಲ್ಲಿ ದಿನಾಂಕ: 12-01-05ರ ತೀರ್ಪಿನಲ್ಲಿ ಈ ಕೆಳಗೆ ಕಾಣಿಸಿದಂತೆ ಆದೇಶಿಸಿದೆ:-

> " The State has a social welfare measure and for promoting the basic education, allowed the private educational institution to run the school and to great extent took up the responsibility of paying the salaries to the teaching and non-teaching staff of the Private Educational Institution by granting aid. By and large, the conditions of service and emoluments paid to the Government servant are extended to the employees working under the Private Aided Institution. It is only a generous gestures on the part of the Government and not to be construed on an imperative obligations to extend all the benefits enjoyed by the civil servants to the employees on private aided schools. The employees of Private Aided Institution are different from the civil servant and all together constitute a different clause. Therefore non grant of equal emoluments does not grant to violation of Article 14 and 16 of the Constitution.
>
> The decision of the Supreme Court reported in AIR 1988 SC 1663 in the case of Haryana State Adhyapak Sangha and others v/s State of Haryana and others is not applicable to the case on hand the grant of aid and facilities to the employees in a private aided schools is essential matter of policy. Hence no mandamus can be issued. Accordingly the petition is dismissed".

12) ಮೇಲೆ ವಿವರಿಸಿದಂತೆ, ರಿಟ್ ಅರ್ಜಿ ಸಂಖ್ಯೆ: 10543-10551/2003ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ನೀಡಿದ ದಿನಾಂಕ: 08-09-04ರ ಆದೇಶದನ್ವಯ ಅರ್ಜಿದಾರರ ಕೋರಿಕೆಯನ್ನು ಮೇಲೆ ವಿವರಿಸಿದಂತೆ ಪರಿಗಣಿಸಿ, ಈ ಕೆಳಕಂಡಂತೆ ಆದೇಶಿಸಿದೆ:-

**ಸರ್ಕಾರಿ ಆದೇಶ ಸಂಖ್ಯೆ: ಇಡಿ 515 ಎಸ್‌ಇಡಬ್ಲ್ಯೂ 2004, ಬೆಂಗಳೂರು**
**ದಿನಾಂಕ : 26ನೇ ಫೆಬ್ರವರಿ 2005.**

13) ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕನ್ನಡ ಪರೀಕ್ಷೆಯನ್ನು ಪಾಸು ಮಾಡಿದ್ದಕ್ಕಾಗಿ ಹೆಚ್ಚುವರಿ ವಾರ್ಷಿಕ ವೇತನ ಬಡ್ತಿ (additional annual increment for having

61

passed Kannada examination) ಸೌಲಭ್ಯವನ್ನು ವಿಸ್ತರಿಸಬೇಕೆಂಬ ಅರ್ಜಿದಾರರ ಕೋರಿಕೆಯನ್ನು ಮೇಲೆ ವಿವರಿಸಿದಂತೆ ನಿಯಮಾನುಸಾರ ಪರಿಶೀಲಿಸಿ ಈ ಮೂಲಕ ಮೇಲೆ ವಿವರಿಸಿದ ಕಾರಣಗಳಿಗಾಗಿ ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

28/2
[ ಸಿದ್ದಲಿಂಗಯ್ಯ ]
ಸರ್ಕಾರದ ಅಧೀನ ಕಾರ್ಯದರ್ಶಿ
28/2/05 ಶಿಕ್ಷಣ ಇಲಾಖೆ.

ಇವರಿಗೆ :

1. ಶ್ರೀ ಸಿದ್ಧಪ್ಪ ಎಸ್.ದಾನಶೆಟ್ಟಿ, ಪ್ರಾಂಶುಪಾಲರು, ಎ.ಕೆ.ನಂದಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
2. ಶ್ರೀ ಶಂಕರಪ್ಪ ಎಸ್.ಹಾಲಿಮನಿ, ದ್ವಿ.ದ.ಸ., ಎ.ಕೆ.ನಂದಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
3. ಶ್ರೀ ಈರಯ್ಯ.ಸಿ. ಪಶುಪತಿ ಮಠ್. ದ್ವಿ.ದ.ಸ., ಎ.ಕೆ.ನಂದಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
4. ಶ್ರೀ ಗೌಡಪ್ಪ.ವೈ.ಬಿರಾದರ್, ಸಹ ಶಿಕ್ಷಕರು, ಎ.ಕೆ.ನಂದಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
5. ಶ್ರೀ ಪರಮಣ್ಣ ಎಸ್.ಕಾಂತಿಗೊಂಡ್, ಪ್ರಾಚಾರ್ಯರು, ಎ.ಕೆ.ನಂದಿ ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
6. ಶ್ರೀ ನಿಂಗೋಡ್.ಎ.ಬಿರಾದಾರ್, ಪ್ರಾಚಾರ್ಯರು, ಎ.ಕೆ.ನಂದಿ ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
7. ಶ್ರೀ ಚಂದ್ರಶೇಖರ್.ಬಿ.ನಾವಿ, ಪ್ರಾಚಾರ್ಯರು, ಎ.ಕೆ.ನಂದಿ ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
8. ಶ್ರೀ ಪರಮನ್ನ.ಟಿ.ಬಿರಾದರ್, ದೈಹಿಕ ಶಿಕ್ಷಕರು, ಎ.ಕೆ.ನಂದಿ ಪದವಿ ಪೂರ್ವ ಕಾಲೇಜು, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
9. ಶ್ರೀ ಶಾಂತಗೌಡ.ಬಿ.ಬಿರಾದರ್, ಸಹ ಶಿಕ್ಷಕರು, ಎ.ಕೆ.ನಂದಿ ಪ್ರೌಢಶಾಲೆ, ಅಲ್‌ಮೇಲ್, ಸಿಂಧಗಿ, ಬಿಜಾಪುರ ಜಿಲ್ಲೆ.
10. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
11. ಹೆಚ್ಚುವರಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
12. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು – 560 001.
13. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬಿಜಾಪುರ.
14. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾಂ.
15. ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿ.

SO SEC-A